**SC. No. 51/2023** **PW-2**

**ಸಾಕ್ಷಿಯನ್ನು ದಿನಾಂಕ 10.07.2025 ರ ಆದೇಶದ ಮೇರೆಗೆ ಪಾಟೀ ಸವಾಲಿಗೆ ಕರೆಸಿ ಸತ್ಯ ಪ್ರತಿಜ್ಞೆ ಮೇರೆಗೆ ಪ್ರಮಾಣೀಕರಿಸಲಾಯಿತು.**

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಆರ್.ಎಸ್ ವಕೀಲರಿಂದ :

ನಾನು 9 ನೇ ತರಗತಿವರೆಗೆ ಕಲಿತಿದ್ದೇನೆ. ಕನ್ನಡ ಭಾಷೆ ಓದಲು ಹಾಗೂ ಬರೆಯಲು ಬರುತ್ತದೆ. ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ನನ್ನ ಗಂಡ ಬಳ್ಳಾರಿಯಲ್ಲಿ ಕೆಲಸ ಮಾಡುತ್ತಿದ್ದು, ನಮ್ಮ ಊರಿಗೆ ಹೋಗಿ ಬಂದು ಮಾಡುತ್ತಿದ್ದನು. ನನಗೆ 2012 ರಲ್ಲಿ ಮಗಳು ಹುಟ್ಟಿದ್ದಳು, ಅವಳ ಹೆಸರು ತಸ್ಮಿಯಾ, ನನ್ನ ಗಂಡ ಬಳ್ಳಾರಿಯ ಹವಂಬಾವಿಯ ಶಿಲ್ಪಿ ನಗರದಲ್ಲಿ ಬಾಡಿಗೆ ಮನೆಯಲ್ಲಿ ನಮ್ಮನ್ನು ತಂದು ಇಟ್ಟಿದ್ದನು, ನಾನು 2 ನೇ ಮಗುವಿಗೆ ಗರ್ಭ ಧರಿಸಿದಾಗ ಬಾಲಾಜಿ ನರ್ಸಿಂಗ್ ಹೋಮಿಗೆ ಚಿಕಿತ್ಸೆಗೆ ಬರುತ್ತಿದ್ದನು, ಸದರಿ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿ ಆರೋಪಿಯೂ ಕೆಲಸ ಮಾಡುತ್ತಿದ್ದಳು, ನನ್ನ ಗಂಡ ಅವಳನ್ನು ನನಗೆ ಪರಿಚಯ ಮಾಡಿಸಿ ಕೊಟ್ಟರು, ಆಗಾಗ ಆಸ್ಪತ್ರೆಗೆ ಹೋಗಿ ಬರುತ್ತಿರುವುದರಿಂದ ನನಗೆ ಮತ್ತು ನನ್ನ ಗಂಡನಿಗೆ ಅವಳ ಪರಿಚಯ ಹೆಚ್ಚಾಯಿತು, ಆರೋಪಿತಳನ್ನು ನನ್ನ ಗಂಡ ಎರಡು ಬಾರಿ ನಮ್ಮ ಮನೆಗೆ ಕರೆದುಕೊಂಡು ಬಂದಿದ್ದನು, ಆರೋಪಿ ಮತ್ತು ನನ್ನ ಗಂಡ ಬಹಳ ಆತ್ಮಿಯತೆಯಿಂದ ಇರುತ್ತಿದ್ದರು ಆ ಕಾರಣ ಅನೈತಿಕ ಸಂಬಂದ ಇಬ್ಬರ ಮಧ್ಯದಲ್ಲಿ ಇದೆ ಎಂದು ಖಚಿತವಾಗಿತ್ತು ಎಂಬುವ ವಿಷಯವನ್ನು ಹೇಳಿಲ್ಲ ಮತ್ತು ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಸದರಿ ನ್ಯಾಯಾಲಯದಲ್ಲಿ ನಾನು ಚಿನ್ನಾಪುರದ ಗಂಡನ ಮನೆಯಲ್ಲಿ ವಾಸ ಇರಬೇಕು ಎಂದು ಕ್ವಾರ್ಟಸ್ ನಲ್ಲಿ ಇರುವುದು ಬೇಡ ಎಂದು ಆದೇಶವಾಗಿರುತ್ತದೆ, ಸದರಿ ಆದೇಶದ ಮೇರೆಗೆ ನಾನು ಚಿನ್ನಾಪುರ ಗ್ರಾಮದಲ್ಲಿ ನಮ್ಮ ಅತ್ತೆ , ಮಾವ , ನಾದಿನಿ ಮತ್ತು ಮೈದುನರ ಜೊತೆ ವಾಸವಾಗಿದ್ದೆನು ಎಂಬ ವಿಷಯವನ್ನು ಹೇಳಿಲ್ಲ ಮತ್ತು ಈ ವಿಷಯವನ್ನು ನ್ಯಾಯಾಲಯದ ಮುಂದೆ ಪ್ರಥಮ

ಬಾರಿಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಾ-1 ಜರೀನಾ ಇವಳು ಚೆನ್ನಾಪುರದಲ್ಲಿ ವಾಸ ಮಾಡುತ್ತಾರೆ. ನಾನು ಕೂಡ ಚೆನ್ನಾಪುರದಲ್ಲಿ ವಾಸ ಮಾಡುತ್ತೇನೆ. ಅಸಾ-1 ಇವರಿಗೆ ಮದುವೆಯಾಗಿದ್ದು ಅವರು ಚೆನ್ನಾಪುರದಲ್ಲಿ ಗಂಡನ ಮನೆಯಲ್ಲಿ ಇರುತ್ತಾರೆ. ಆರೋಪಿತಳು ನನ್ನ ಗಂಡನನ್ನು ಕೊಲೆ ಮಾಡಿದ್ದಾಳೆ ಎಂದು ನಾನು ದೂರನ್ನು ನೀಡಿಲ್ಲ ಆದರೆ ನನ್ನ ನಾದಿನಿ ದೂರನ್ನು ನೀಡಿರುತ್ತಾಳೆ. ದಿನಾಂಕ 22.03.2023 ರಂದು ಯುಗಾದಿ ಹಬ್ಬ ಇತ್ತು ಎಂದರೆ ಸರಿ. ನನ್ನ ಗಂಡ ಡಿ.ಎ.ಆರ್ ಪೊಲೀಸ್ ಪೇದೆ ಆಗಿದ್ದ ಎಂದರೆ ಸರಿ. ದಿವಸದಂದು ಸರಕಾರಿ ರಜೆ ಇತ್ತು. ನನ್ನ ಗಂಡ ಡಿ.ಎ.ಆರ್ ಪೊಲೀಸ್ ಪೇದೆ ಆಗಿದ್ದರಿಂದ ಅವನಿಗೆ ಸರಕಾರಿ ರಜೆ ಇರಲಿಲ್ಲ ಎಂದರೆ ಸರಿ.

ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ದಿನಾಂಕ 22.03.2023 ರಂದು ಯುಗಾದಿ ಹಬ್ಬದದಿನ ರಜೆ ಇದ್ದಿದರಿಂದ ಚೆನ್ನಾಪುರ ಗ್ರಾಮಕ್ಕೆ ಬೆಳಗೆ ಬಂದಿರುತ್ತಾನೆ, ನಂತರ ನನಗೆ ಮತ್ತು ನನ್ನ ಮಗ ಶಾಹಿನ್ ಗೆ ಕರೆದುಕೊಂಡು ಕಂಪ್ಲಿಗೆ ಹೋಗಿ ಶಾಪಿಂಗ್ ಮಾಡಿದ್ದು ನನ್ನ ಮಗನಿಗೆ ಹೊಸ ಸೈಕಲ್ ಖರೀದಿ ಮಾಡಿಕೊಡಿಸಿರುತ್ತಾನೆ ಎಂದು ಹೇಳಿಲ್ಲ. ಹೇಳಿಕೆಯ ಸದರಿ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು. ನಾನು ಪೊಲಿಸರಿಗೆ ನೀಡಿದ ಹೇಳಿಕೆಯಲ್ಲಿ ನಂತರ ರಾತ್ರಿ 10.30 ಗಂಟೆಗೆ ನಮಗೆ ಗೊತ್ತಾಗಿದ್ದೇನೆಂದರೆಹನುಮಕ್ಕಳು ನಮ್ಮ ನಾದಿನಿ ಜರೀನಾಗೆ ಪೋನ್ ಮಾಡಿ ಜಾಪರ್ ಸಾಹೇಬ್ ಗೆ ಡಿ.ಎ.ಆರ್ ಪೊಲೀಸ್ ಕ್ವಾಟ್ರಸ್ ಮನೆಯಲ್ಲಿ ಯಾರೋ ಬಂದು ಹೊಡೆದು ಹೋಗಿರುತ್ತಾರೆ ಎಂದು ಹೇಳಿರುವುದಿಲ್ಲ. ಹೇಳಿಕೆಯ ಸದರಿ ಭಾಗವನ್ನು ನಿಡಿ-2 ಎಂದು ಗುರುತಿಸಲಾಯಿತು. ನಾನು ಪೊಲಿಸರಿಗೆ ನೀಡಿದ ಹೇಳಿಕೆಯಲ್ಲಿ ನನ್ನ ಗಂಡನು ನನ್ನ ಮತ್ತು ನನ್ನ ಮಕ್ಕಳೊಂದಿಗೆ ಚೆನ್ನಾಗಿ ಸಂಸಾರ ಮಾಡಿಕೊಂಡು ಹೋಗುತ್ತಿದ್ದು ಎಂದು ಹೇಳಿಲ್ಲ. ಹೇಳಿಕೆಯ ಸದರಿ ಭಾಗವನ್ನು ನಿಡಿ-3 ಎಂದು ಗುರುತಿಸಲಾಯಿತು.

ನಾನು ನನ್ನ ಗಂಡನ ವಿರುದ್ಧ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ನನ್ನ ಗಂಡ ಮರಣ ಹೊಂದುವವರೆಗೂ ಕೂಡ ನನಗೆ ಜೀವನಾಂಶದ ಹಣವನ್ನು ನೀಡುತ್ತಿದ್ದರು ಎಂದರೆ ಸರಿ. ನಾನು ನನ್ನ ಗಂಡನ ವಿರುದ್ಧ ವರದಕ್ಷಿಣೆ ಕಿರುಕುಳ ಹಾಗೂ ಕೌಟುಂಬಿಕ ದೌರ್ಜನ್ಯ

ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದೆ ಎಂದರೆ ಸರಿ. ನನ್ನ ಗಂಡ ಹೇಗೆ ಮತ್ತು ಯಾವಾಗ ಮರಣ ಹೊಂದಿದರು ಎಂದು ನಾನು ನೋಡಿಲ್ಲ. ನನಗೂ ಮತ್ತು ನನ್ನ ಗಂಡನಿಗೂ ಸಂಸಾರದ ವಿಚಾರದಲ್ಲಿ ವೈಮನಸ್ಸು ಇತ್ತು ಎಂದರೆ ಆರೋಪಿತಳಿಂದಾಗಿ ಇತ್ತು ಎಂದು ಸಾಕ್ಷಿ ಉತ್ತರಿಸುತ್ತಾರೆ. ದಿನಾಂಕ **22.03.2023** ರಲ್ಲಿ ನನ್ನ ಗಂಡನ ವಸತಿ ಗೃಹದಲ್ಲಿ ಯಾರಾರು ಇದ್ದರು ಎಂದು ನಾನು ನೋಡಿಲ್ಲ. ನನ್ನ ಗಂಡನ ಸಾವನ್ನು ದುರ್ಬಳಕೆ ಮಾಡಿಕೊಂಡು ಆರೋಪಿತಳ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಕೊಲೆ ಪ್ರಕರಣ ನನ್ನ ಮೇಲೆ ಬರುತ್ತದೆ, ಅದನ್ನು ತಪ್ಪಿಸುವ ಉದ್ದೇಶದಿಂದ ನಾನು ಹಾಗೂ ನನ್ನ ನಾದಿನಿ ಸೇರಿಕೊಂಡು ಸುಳ್ಳು ಕಥೆ ಕಟ್ಟಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .)

ಓ . ಹೇ. ಕೆ . ಸರಿ ಇದೆ .

**C/c, 2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ .